# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ಕಛೇರಿ, ಕೊಡಗು-ಮಡಿಕೇರಿ.

## ಅಧಿಸೂಚನೆ

**ದಿನಾಂಕಃ 12 ನೇ ಫೆಬ್ರುವರಿ 2026**

**ವಿಷಯಃ**-ನವಕಾನೂನು ಪದವೀಧರರಿಗೆ 2025-26 ನೇ ಸಾಲಿನ ಪ್ರೋತ್ಸಾಹಧನ ನೀಡುವ ಯೋಜನೆಯ ಫಲಾನುಭವಿಗಳನ್ನು ಜಿಲ್ಲಾ ಮಟ್ಟದ ಸಮಿತಿಯಲ್ಲಿ ಆಯ್ಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

**ಉಲ್ಲೇಖಃ**-1.ಕರ್ನಾಟಕ ಸರ್ಕಾರದ ನಡವಳಿಯ ಸರ್ಕಾರದ ಆದೇಶ ಸಂಃ ಲಾ ಎಲ್‌ಎಡಿ /110/2026, ಬೆಂಗಳೂರು, ದಿಃ 09.02.2026.

2. ಈ ಕಛೇರಿ ಟಿಪ್ಪಣಿಯ ಮೇಲಿನ ಆದೇಶ ದಿಃ 12.02.2026.

*****

ಉಲ್ಲೇಖ-1 ರಂತೆ ನವಕಾನೂನು ಪದವೀಧರರಿಗೆ ಪ್ರೋತ್ಸಾಹಧನ ನೀಡುವ ಯೋಜನೆಗೆ 2025-26 ನೇ ಸಾಲಿನಲ್ಲಿ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಿ ಅರ್ಹ ಫಲಾನುಭವಿಗಳಿಗೆ ಸರ್ಕಾರದ ಸೌಲಭ್ಯಗಳನ್ನು ತ್ವರಿತವಾಗಿ ತಲುಪಿಸುವ ಉದ್ದೇಶದಿಂದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಲಾಗಿದೆ.

ಆದ್ದರಿಂದ ಅರ್ಹವಿರುವ ನವಕಾನೂನು ಪದವೀಧರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹರಿರುವ ನವಕಾನೂನು ಪದವೀಧರರು ಈ ಅಧಿಸೂಚನೆಯಲ್ಲಿ ತಿಳಿಸಿರುವ ಷರತ್ತು ಹಾಗೂ ಸೂಚನೆಗಳನ್ವಯ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ ಸ್ವಯಂ ದೃಢೀಕರಿಸಿದ ದಾಖಲೆ ಪ್ರತಿಗಳೊಂದಿಗೆ ಕೆಳಗೆ ತಿಳಿಸಿದ ಸಂಬಂಧಪಟ್ಟ ಹಿರಿಯ ನ್ಯಾಯಾಧೀಶರುಗಳ ಮುಖಾಂತರ ಸಲ್ಲಿಸತಕ್ಕದ್ದು.

ಅರ್ಜಿಯನ್ನು ಸಲ್ಲಿಸಲು ಪ್ರಾರಂಭದ ದಿನಾಂಕಃ 18.02.2026 ಹಾಗೂ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕಃ 17.03.2026 ಸಂಜೆ 5.30 ಗಂಟೆ.

## ಅರ್ಜಿ ಸಲ್ಲಿಸಬೇಕಾದ ವಿಳಾಸ

1. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ.
2. 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ. (ಕಾರ್ಯ ನಿರ್ವಹಣೆ-ವಿರಾಜಪೇಟೆ).

3. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸೋಮವಾರಪೇಟೆ .

4. ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಪೊನ್ನಂಪೇಟೆ.

5. ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕುಶಾಲನಗರ.

**ಷರತ್ತುಗಳು:-**

1. ಈ ಯೋಜನೆಯು 2025-26 ನೇ ಸಾಲಿನದ್ದಾಗಿ ಅನುಷ್ಠಾನಗೊಳ್ಳುತ್ತಿದ್ದು, ಈ ಯೋಜನೆಯಡಿ ಅರ್ಜಿ ಸಲ್ಲಿಸುವ ಅರ್ಹ ಅಭ್ಯರ್ಥಿಗಳು ಕರ್ನಾಟಕ ರಾಜ್ಯ ವಕೀಲರ ಷರತ್ತಿನಡಿಯಲ್ಲಿ ದಿಃ 01.06.2024 ರಿಂದ 31.05.2025 ರವರೆಗಿನ ಅವಧಿಯಲ್ಲಿ ವಕೀಲ ವೃತ್ತಿಗೆ ನೊಂದಾಯಿಸಿದವರಿಗೆ ಮಾತ್ರ ಅನ್ವಯವಾಗುವುದು.

2. ಈ ಯೋಜನೆಯಡಿಯಲ್ಲಿ ಪ್ರೋತ್ಸಾಹಧನದ ಮೊತ್ತ ಪ್ರತಿ ಮಾಹೆಗೆ ರೂ.2000/- (ಎರಡು ಸಾವಿರ ರೂಪಾಯಿಗಳು)ಒಟ್ಟು 24 ತಿಂಗಳುಗಳ ಅವಧಿಗೆ ಸೀಮಿತವಾಗಿರುವುದು.

3. ಸರ್ಕಾರಿ, ಅರೆ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿ ವಯೋನಿವೃತ್ತಿ ಕಡ್ಡಾಯ ನಿವೃತ್ತಿ ಮತ್ತು ಸ್ವಇಚ್ಛಾ ನಿವೃತ್ತಿ ಹೊಂದಿದ ನಂತರ ವಕೀಲ ವೃತ್ತಿ ನಡೆಸಲು ಇಚ್ಛಿಸುವ ಕಾನೂನು ಪದವೀಧರರು ಮತ್ತು ಅಂತಹ ಯಾವುದೇ ಸೇವೆಯಿಂದ ತೆಗೆದುಹಾಕಲ್ಪಟ್ಟ ಕಾನೂನು ಪದವೀಧರರಿಗೆ ಸಹ ಅನ್ವಯವಾಗುವುದಿಲ್ಲ.

4. ಈ ಯೋಜನೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಯ/ಕುಟುಂಬದ ವಾರ್ಷಿಕ ವರಮಾನದ ಮಿತಿಯು ರೂ.40,000/- (ನಲವತ್ತು ಸಾವಿರ ರೂಪಾಯಿಗಳು) ನ್ನು ಮೀರತಕ್ಕದ್ದಲ್ಲ.

5. ಇಂತಹದೇ ಸೌಲಭ್ಯವನ್ನು ಈ ಯೋಜನೆ/ಇತರೆ ಯೋಜನೆಯಡಿ ಅಥವಾ ರಾಜ್ಯ ಸರ್ಕಾರದ ಬೇರೆ ಯಾವುದೇ ಇಲಾಖೆಯ ಯೋಜನೆಯಡಿ ಆಯ್ಕೆಗೊಂಡ ಫಲಾನುಭವಿಗಳು ಈ ಯೋಜನೆಯ ಸೌಲಭ್ಯಗಳಿಗೆ ಅರ್ಹರಾಗುವುದಿಲ್ಲ.

6. ಹೊಸದಾಗಿ ವಕೀಲರ ವೃತ್ತಿಯಲ್ಲಿ ತೊಡಗುವ ಕಾನೂನು ಪದವೀಧರರು ರಾಜ್ಯ ಬಾರ್ ಕೌನ್ಸಿಲ್ ನಲ್ಲಿ ನೊಂದಾಯಿಸಿದ ನಂತರ ಸ್ಥಳೀಯ ವಕೀಲರ ಸಂಘದ ಅಧ್ಯಕ್ಷರಿಂದ ಪ್ರಮಾಣ ಪತ್ರ ಪಡೆದು ಸಂಬಂದಪಟ್ಟ ಸಮಿತಿಯ ಸಂಬಂಧಿತ ತಾಲ್ಲೂಕಿನ ಹಿರಿಯ ನ್ಯಾಯಾಧೀಶರುಗಳ ಮುಖಾಂತರ ಮತ್ತು ಜಿಲ್ಲಾ ಹಂತದಲ್ಲಿ ಅರ್ಹ ಕಾನೂನು ಪದವೀಧರರು ನೇರವಾಗಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೊಡಗು-ಮಡಿಕೇರಿ ರವರಿಗೆ ವಿಳಾಸಿಸಿ ಅರ್ಜಿ ಸಲ್ಲಿಸತಕ್ಕದ್ದು.

**ಸೂಚನೆಗಳು:-**

1. ಈ ಅಧಿಸೂಚನೆಯೊಂದಿಗೆ ಲಗತ್ತಿಸಿರುವ ಅನುಬಂಧ-1 ಮತ್ತು 3 ರ ನಮೂನೆಗಳನ್ನು ಭರ್ತಿ ಮಾಡಿ ಸಲ್ಲಿಸತಕ್ಕದ್ದು.
2. ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಅರ್ಜಿಯೊಂದಿಗೆ ಸಂಬಂಧಪಟ್ಟ ದಾಖಲೆಗಳನ್ನು ಕಡ್ಡಾಯವಾಗಿ ಲಗತ್ತಿಸಿ ಅರ್ಹ ಅಭ್ಯರ್ಥಿಗಳು ಮೇಲೆ ತಿಳಿಸಿದ ಆಯಾ ತಾಲ್ಲೂಕಿನ ಹಿರಿಯ ನ್ಯಾಯಾಧೀಶರ ಮುಖಾಂತರ ಅರ್ಜಿಯನ್ನು ಸಲ್ಲಿಸತಕ್ಕದ್ದು. ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
3. ಎಸ್.ಎಸ್.ಎಲ್.ಸಿ ಅಂಕಪಟ್ಟಿ, ದ್ವಿತೀಯ ಪಿಯುಸಿ ಅಂಕಪಟ್ಟಿ, ಪದವಿ ಅಂಕಪಟ್ಟಿ, ಕಾನೂನು ಪದವಿಯ ಪ್ರಮಾಣ ಪತ್ರ , ರಾಜ್ಯ ಬಾರ್ ಕೌನ್ಸಿಲಿನ ನೊಂದಣಿ ಪತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಮತ್ತು ವಕೀಲ ವೃತ್ತಿ ನಿರ್ವಹಿಸುತ್ತಿರುವ ಬಗ್ಗೆ ಸಂಬಂಧಿಸಿದ ವಕೀಲರ ಸಂಘದ ಅಧ್ಯಕ್ಷರಿಂದ ಪ್ರಮಾಣ ಪತ್ರವನ್ನು ಪಡೆದು ಎಲ್ಲಾ ದಾಖಲೆಗಳ ಪ್ರತಿಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
4. ಇತ್ತೀಚಿನ ಭಾವಚಿತ್ರ ಮತ್ತು ಆಧಾರ್ ಕಾರ್ಡ್/ಚುನಾವಣಾ ಗುರುತಿನ ಚೀಟಿಯ ಜೆರಾಕ್ಸ್ ಪ್ರತಿಯನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
5. ಅರ್ಹ ಅಭ್ಯರ್ಥಿಗಳಿಗೆ ಪ್ರೋತ್ಸಾಹಧನ ನೀಡುವ ಸಂಬಂಧ/ಆಯ್ಕೆಯ ಸಂಬಂಧ ಜಿಲ್ಲಾ ಹಂತದ ಸಮಿತಿಯಿಂದ ಮಾಡಲಾಗುವ ತೀರ್ಮಾನವೇ ಅಂತಿಮವಾಗಿರುತ್ತದೆ.

Sd/xxx
**(ಹೊಸಮನಿ ಪುಂಡಲಿಕ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.

**ಪ್ರತಿಯನ್ನು ಮಾಹಿತಿಗಾಗಿ :-**

ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ, ಕಾನೂನು ಇಲಾಖೆ, (ಆಡಳಿತ-2), ವಿಧಾನ ಸೌಧ, ಬೆಂಗಳೂರು.

**ಪ್ರತಿಯನ್ನು ಮಾಹಿತಿ ಹಾಗೂ ವ್ಯಾಪಕ ಪ್ರಚಾರಕ್ಕಾಗಿ –**

1. ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ –ರವರ ಕಛೇರಿ ಸೂಚನಾ ಫಲಕದಲ್ಲಿ ಪ್ರಕಟಿಸಲು.
2. ಪ್ರಧಾನ ಸರ್ಕಾರಿ ಅಭಿಯೋಜಕರು, ಅಭಿಯೋಜನ ಇಲಾಖೆ, ಮಡಿಕೇರಿ.
3. ಜಿಲ್ಲಾ ನ್ಯಾಯಾಲಯದ ಘಟಕದ ಎಲ್ಲಾ ಅಧೀನ ನ್ಯಾಯಾಲಯಗಳ ಸೂಚನಾ ಫಲಕಕ್ಕೆ
4. ಅಧ್ಯಕ್ಷರು, ವಕೀಲರ ಸಂಘ, ಮಡಿಕೇರಿ/ವಿರಾಜಪೇಟೆ/ಸೋಮವಾರಪೇಟೆ/ಪೊನ್ನಂಪೇಟೆ/ಕುಶಾಲನಗರ, ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು
5. ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ, ಕೊಡಗು–ಮಡಿಕೇರಿ ಇವರಿಗೆ ಸೂಚನಾ ಫಲಕದಲ್ಲಿ ಪ್ರಕಟಿಸಲು.
6. ಗಣಕಯಂತ್ರ ವಿಭಾಗ, ಜಿಲ್ಲಾ ನ್ಯಾಯಾಲಯ, ಮಡಿಕೇರಿ, ಜಿಲ್ಲಾ ನ್ಯಾಯಲಯದ ವೆಬ್‌ಸೈಟ್ ನಲ್ಲಿ ಪ್ರಕಟಿಸಲು.
7. ಜಿಲ್ಲಾ ನ್ಯಾಯಾಲಯದ ಸೂಚನಾ ಫಲಕಕ್ಕೆ
8. ಕಛೇರಿಯ ಕಡತಕ್ಕೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು–ಮಡಿಕೇರಿ.

# ಅನುಬಂಧ-1

## ಕರ್ನಾಟಕ ಸರ್ಕಾರದ ಕಾನೂನು ಇಲಾಖೆಯಡಿಯಲ್ಲಿ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ನೀಡುವ ಯೋಜನೆಯ ನಮೂನೆ

| | | |
|---|---|---|
| 1) | **ಅರ್ಜಿದಾರರ ಹೆಸರು :** (ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿರುವಂತೆ) | |
| 2) | **ಅರ್ಜಿದಾರರ ತಂದೆ / ಗಂಡನ ಹೆಸರು :** (ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿರುವಂತೆ) | |
| 3) | **ಹುಟ್ಟಿದ ದಿನಾಂಕ :** (ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿರುವಂತೆ) | |
| 4) | **ವಿಳಾಸ ಪ್ರಸ್ತುತ :**<br><br>ಖಾಯಂ ವಿಳಾಸ :<br><br>ಕಛೇರಿ ವಿಳಾಸ: | |
| 5) | **ವಿವಾಹಿತರೇ?** | |
| 6) | **ಭಾರತೀಯ ಪ್ರಜೆಯೇ?** | |
| 7) | **ಧರ್ಮ** | |
| 8) | **ಜಾತಿ & ಪ್ರವರ್ಗ** | |
| 9) | **ಶೈಕ್ಷಣಿಕ ವಿದ್ಯಾರ್ಹತೆಗಳು:** | |

| ಕ್ರ. ಸಂ. | ತೇರ್ಗಡೆಗೊಂಡ ವಿದ್ಯಾರ್ಹತೆ | ವರ್ಷ | ಶೇಕಡಾ ಅಂಕ | ಪ್ರಮಾಣ ಪತ್ರದ ಪ್ರತಿ ಲಗತ್ತಿಸುವುದು |
|---|---|---|---|---|
| 1 | ಎಸ್.ಎಸ್.ಎಲ್.ಸಿ. (10th) | | | |
| 2 | ಪಿ.ಯು.ಸಿ. (12 th) | | | |
| 3 | ಪದವಿ | | | |
| 4 | ಕಾನೂನು ಪದವಿ | | | |

...... 2

| | | |
|---|---|---|
| 10) | **ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನಲ್ಲಿ ನೋಂದಾಯಿಸಿದ ಸಂಖ್ಯೆ ಮತ್ತು ದಿನಾಂಕ :(ಸಂಬಂಧಿತ ದಾಖಲೆಯ ಪ್ರತಿ)** | |
| 11) | **ಪ್ರಸ್ತುತ ವಕೀಲ ವೃತ್ತಿ ನಡೆಸುತ್ತಿದ್ದಲ್ಲಿ ವಿವರ:(ಸಂಬಂಧಿತ ದಾಖಲೆಯ ಪ್ರತಿ)** | |
| 12) | **ಇತರೆ ಮಾಹಿತಿ:** | |

**ಲಾ-ಎಲ್ಎಡಿ/110/2026**

ಮೇಲಿನ ನಮೂನೆಯಲ್ಲಿ ನೀಡಲಾಗಿರುವ ಮಾಹಿತಿಯನ್ನು ನಾನು ಪ್ರಜ್ಞಾಪೂರ್ವಕವಾಗಿ ಸತ್ಯವೆಂದು ಅರಿತು ನೀಡಿರುತ್ತೇನೆ. ಒಂದು ವೇಳೆ ಈ ಮಾಹಿತಿಯಲ್ಲಿ ಯಾವುದೇ ಅಂಶಗಳು ಸತ್ಯಾಂಶದಿಂದ ಕೂಡಿಲ್ಲವೆಂದು ತಿಳಿದು ಬಂದಲ್ಲಿ ಆಯ್ಕೆ ಪ್ರಾಧಿಕಾರವು / ಸರ್ಕಾರವು ನಿಯಮಾನುಸಾರ ನನ್ನ ಮೇಲೆ ಅವಶ್ಯಕ ಕಾನೂನು ಕ್ರಮ ಜರುಗಿಸಬಹುದೆಂದು ನಾನು ಒಪ್ಪಿಗೆಯನ್ನು ಈ ಮೂಲಕ ನೀಡಿರುತ್ತೇನೆ.

**ಅರ್ಜಿದಾರರ ಸಹಿ**

**(ಹೆಸರು)**

# ಅನುಬಂಧ-2

## 2025-26ನೇ ಸಾಲಿಗೆ ನವ ಕಾನೂನು ಪದವೀಧರರಿಗೆ ಕಾನೂನು ಇಲಾಖೆಯಿಂದ ನೀಡಲಾಗುವ ಪ್ರೋತ್ಸಾಹಧನ ಯೋಜನೆಯ ಅನುಷ್ಠಾನದ ವೇಳಾಪಟ್ಟಿ (ಲಾ - ಎಲ್‌ಎಡಿ/110/2026)

| ಕ್ರಮ ಸಂಖ್ಯೆ | ಯೋಜನೆ ಅನುಷ್ಠಾನದ ವಿಷಯ | ನಿಗಧಿಪಡಿಸಿದ ಅವಧಿ |
|---|---|---|
| 1 | ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ | 18-02-2026 |
| 2 | ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 17-03-2026 |
| 3 | ಅರ್ಜಿಗಳ ಪರಿಶೀಲನೆಗೊಂಡು ಆಯ್ಕೆ ಸಮಿತಿಗೆ ಸಲ್ಲಿಸಲು ಪಟ್ಟಿ ತಯಾರಿಗೊಳಿಸಬೇಕಾದ ಅವಧಿ | 18-03-2026 ರಿಂದ 31-03-2026 |
| 4 | ಆಯ್ಕೆ ಸಮಿತಿಯು ಫಲಾನುಭವಿಗಳನ್ನು ಆಯ್ಕೆ ಮಾಡಲು ಸಂಬಂಧಿತ (ತಾಲ್ಲೂಕುವಾರು) ಸಭೆ ನಡೆಸಬೇಕಾದ ಅವಧಿ ಮತ್ತು ಆಯ್ಕೆ ಪಟ್ಟಿ ತಯಾರಿಸುವ ಅವಧಿ. | 01-04-2026 ರಿಂದ 15-04-2026 ರವರೆಗೆ |
| 5 | ಆಯ್ಕೆ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸುವ ಅವಧಿ ಜಿಲ್ಲಾ ಆಯ್ಕೆ ಸಮಿತಿಯಿಂದ ಈ ಯೋಜನೆಯ ಅನುಷ್ಠಾನದ ಫಲಾನುಭವಿಗಳ ಪಟ್ಟಿಯ ವಿವರವಾದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಇರುವ ಅವಧಿ | 16-04-2026 ರಿಂದ 30-04-2026 ರವರೆಗೆ |
| 6 | ಸರ್ಕಾರದಲ್ಲಿ ಎಲ್ಲಾ ಜಿಲ್ಲಾ ಆಯ್ಕೆ ಸಮಿತಿಗಳಿಂದ ಸ್ವೀಕೃತಗೊಂಡ ಯೋಜನಾ ಅನುಷ್ಠಾನದ ವರದಿಗಳನ್ನು ಕ್ರೂಢೀಕರಿಸುವ ಅವಧಿ ಮತ್ತು ಅನುದಾನ ಬಿಡುಗಡೆಗೊಳಿಸುವ ಅವಧಿ-ಜಿಲ್ಲಾವಾರು | 01-05-2026 ರಿಂದ 30-05-2026 ರವರೆಗೆ |

Adi 09/2/26

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2)

## ಅನುಬಂಧ-3

**Details of Law Graduates (Beneficiaries) applied during the year 2025-26**

| | |
|---|---|
| District | |
| Taluk | |
| Beneficiary Name (Eng) | |
| Beneficiary Name (Kan) | |
| Beneficiary Address (Eng) | |
| Beneficiary Address (Kan) | |
| DOB DD/MM/YEAR | |
| Gender | |
| Bank Details:<br>Name of the Bank & Branch | |
| IFSC Code | |
| Bank Account Number | |
| Mobile No. | |
| Aadhaar Number | |

- **Note : The Beneficiary details should be provided as per Aadhaar Card**